**ಓ.ಎಸ್. ನಂ. 93/2023** **ಪಿ.ಡಬ್ಲ್ಯೂ- 2**

**ಸಾಕ್ಷಿಯನ್ನು ದಿನಾಂಕ 20.9.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1,2 6 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ**

ದಾವಾ ನಂ. ಸರ್ವೆ ನಂ. 8 ಆಗಿದ್ದು ಅದರ ವಿಸ್ತೀರ್ಣ 2 ಎಕರೆ 20 ಗುಂಟೆ ಆಗಿರುತ್ತದೆ. ನನಗೆ ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ಜಮೀನು ಇರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಕೆರೆ ಮತ್ತು ಕೆಂಡಗಣ್ಣಪ್ಪ ಅವರ ಜಮೀನು, ಪಶ್ಚಿಮ ಮತ್ತು ಉತ್ತರಕ್ಕೆ ಗ್ರಾಮ ಠಾಣಾ ಮತ್ತು ದಕ್ಷಿಣಕ್ಕೆ ಸರ್ವೆ ನಂ. 10 ರ ಸಾಲುಂಡಿ ಗೌಡರ ಜಮೀನು ಇರುತ್ತದೆ. ಸದರಿ ಸಾಲುಂಡಿ ಗೌಡರ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಗ್ರಾಮ ಠಾಣಾ, ಉತ್ತರಕ್ಕೆ ದಾವಾ ಆಸ್ತಿ ಮತ್ತು ದಕ್ಷಿಣಕ್ಕೆ ಸುಂದರ್ ದಾಸ್ ಅವರ ಜಮೀನು ಇರುತ್ತದೆ. ಮೇಲೆ ಹೇಳಿದ ಕೆಂಡಗಣ್ಣಪ್ಪ ಅವರ ಜಮೀನು ಸರ್ವೆ ನಂ. 9 ಆಗಿರುತ್ತದೆ. ಅದರ ಪೂರ್ವಕ್ಕೆ ನೂರಲಕುಪ್ಪೆ ಗ್ರಾಮ ಠಾಣಾ ಗಡಿ, ಪಶ್ಚಿಮಕ್ಕೆ ದಾವಾ ಆಸ್ತಿ, ಉತ್ತರಕ್ಕೆ ಕೆರೆ ಮತ್ತು ದಕ್ಷಿಣಕ್ಕೆ ಸುಂದರ್ ದಾಸ್ ಅವರ ಮಾವನ ಜಮೀನು ಇರುತ್ತದೆ. ದಾವಾ ಆಸ್ತಿಯಲ್ಲಿ 8 ರಿಂದ 10 ಮನೆಗಳು ಇರುತ್ತವೆ, ಸದರಿ ಮನೆಗಳು 2, 7 ನೇ ಪ್ರತಿವಾದಿ, ಹೊಸಹಳ್ಳಿ ಗೌಡರ ಮನೆ, ಕಲೀಮ ಅವರ ಮನೆ, 3 ರಿಂದ 5 ನೇ ಪ್ರತಿವಾದಿಯರ ಮನೆ ಇರುತ್ತದೆ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಸಂಬಂಧಪಟ್ಟ ಖಾಲಿ ನಿವೇಶನ ಇರುತ್ತದೆ. ದಾವಾ ಆಸ್ತಿಯಲ್ಲಿ 6 ನೇ ಪ್ರತಿವಾದಿಗೆ ಸಂಬಂಧಪಟ್ಟ ಮನೆ ಇರುತ್ತದೆ. ಮೇಲೆ ಹೇಳಿದವರನ್ನು ಹೊರತುಪಡಿಸಿ ದಾವಾ ಆಸ್ತಿಯಲ್ಲಿ ಇನ್ನು 8/10 ಮನೆಗಳು ಇರುತ್ತವೆ. ಪ್ರತಿವಾದಿಗಳು ನೋಂದಣಿ ಕ್ರಯದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಫೋರ್ಜರಿ ಮಾಡಿರುತ್ತಾರೆ ಎನ್ನುವರು. ಫೋರ್ಜರಿ ಮಾಡಿರುವ ವಿಚಾರ 5-6 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನನಗೆ ಪಿ.ಡಿ.ಓ ಮುಖಾಂತರ ಫೋರ್ಜರಿ ಆಗಿರುವ ವಿಚಾರ ಗೊತ್ತಾಗಿರುತ್ತದೆ. 1 ನೇ ಪ್ರತಿವಾದಿ ಸರ್ವೆ ನಂ. 8/2 ರಲ್ಲಿ 6 ಗುಂಟೆ ಜಮೀನನ್ನು ದಿನಾಂಕಃ 11.11.2005 ರಂದು ಅನ್ವರ್ ಪಾಶಾ ಮತ್ತು ಅವರ ಹೆಂಡತಿ ಮಕ್ಕಳಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯ ತಂದೆ ಅಬ್ದುಲ್ ಸತಾರ್ ಖಾನ್ ಅವರು ದಾವಾ ಆಸ್ತಿಯ ಪೈಕಿ 13 ವರೆ ಗುಂಟೆ ಜಮೀನನ್ನು ದಿನಾಂಕಃ 7.3.1970 ರಂದು ರೆಹಮಾನ್ ಸಾಬ್ ಅವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 7 ನೇ ಪ್ರತಿವಾದಿಯು ಖಾತೆ ಮಾಡಿಕೊಂಡು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮ ಖಾತೆ ಮಾಡಿಕೊಂಡು ವಾಸವಾಗಿರುತ್ತಾರೆ ಎನ್ನುವರು. 7 ನೇ ಪ್ರತಿವಾದಿಯ ಸಹೋದರರು ಸಹ ಖಾತೆ ಮಾಡಿಕೊಂಡು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮ ಖಾತೆ ಮಾಡಿಕೊಂಡು ವಾಸವಾಗಿರುತ್ತಾರೆ ಎನ್ನುವರು. 6 ನೇ ಪ್ರತಿವಾದಿ ದಾವಾ ಆಸ್ತಿಯ ಪೈಕಿ 20 ಗುಂಟೆ ಜಮೀನನ್ನು ದಿನಾಂಕಃ 26.6.1986 ರಂದು ಖರೀದಿ ಮಾಡಿಕೊಂಡು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಎನ್ನುವರು. ಅಕ್ರಮ ಮಾಡಿಕೊಂಡಿರುವ ಬಗ್ಗೆ ವಾದಿಯರು ಗ್ರಾಮ ಪಂಚಾಯಿತಿಗೆ

ದೂರು ನೀಡಿರುತ್ತಾರೆ. ವಾದಿಯರು ನನ್ನ ಸಂಬಂಧಿಕರಾಗಿರುವುದಿಲ್ಲ ಆದರೆ ಒಂದೇ ಊರಿನವರಾಗಿದ್ದು ಅವರ ಜಮೀನನ್ನು ನಾವು ಉಳುಮೆ ಮಾಡುತ್ತೇವೆ. ವಾದಿಯರು ಮೈಸೂರಿನಲ್ಲಿ ವಾಸವಾಗಿರುತ್ತಾರೆ. ದಾವಾ ಆಸ್ತಿಗಳಲ್ಲಿರುವ ಮನೆಗಳಿಗೆ ಸಂಬಂಧಿಸಿದಂತೆ ಖಾತೆಗಳು ಆಗಿರುತ್ತವೆ ಎಂದರೆ ಸಾಕ್ಷಿದಾರರು ಅಕ್ರಮ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುವರು. ದಾವಾ ಆಸ್ತಿಯಲ್ಲಿ ಯಾವುದೇ ವ್ಯವಸಾಯ ಮಾಡುವ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ಚೆನ್ನಾಗಿ ಇರುತ್ತೇವೆ ಎಂದರೆ ಸರಿ. ವಾದಿಯರಿಗೂ ಪ್ರತಿವಾದಿಯರಿಗೂ ಮನಸ್ತಾಪ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ವಾದಿ ಪರ ವಕೀಲರು ಹೇಳಿರುತ್ತಾರೆ. ದಾವಾ ಸರ್ವೆ ನಂಬರ್ ನಲ್ಲಿ ಯಾವುದೇ ಕೃಷಿ ಜಮೀನು ಇರುವುದಿಲ್ಲ ಎಲ್ಲರೂ ಮನೆ ಕಟ್ಟಿಕೊಂಡು ಖಾತೆ ಮಾಡಿಕೊಂಡಿದ್ದು ವಾದಿಯರು ಯಾವುದೇ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಎ.ಸಿ. ನ್ಯಾಯಾಲಯದಲ್ಲಿ ದಾವೆ ಹಾಕಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಕೃಷಿ ಜಮೀನು ಇರುವುದಿಲ್ಲ, ವಾದಿಯರು ಸ್ವಾಧೀನದಲ್ಲಿ ಇರುವುದಿಲ್ಲ, ಪ್ರತಿವಾದಿಯರು ಹಿಂದಿನ ಮಾಲೀಕರಿಂದ ದಾವಾ ಆಸ್ತಿಗಳನ್ನು ಖರೀದಿ ಮಾಡಿದ್ದು ಅವರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪಾಟೀಸವಾಲುಃ 8 ರಿಂದ 12 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.)

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.